ಕಾವೇರಿ ನೀರಿನ ವಿವಾದದ ಬಂದ್‌ನ ಸಮಯದಲ್ಲಿ ಹಾನಿಗೊಳಗಾದ ನಷ್ಟದ ಅಂದಾಜು

1503. ಶ್ರೀ ಎಂ. ಪಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಗೃಹ ಮತ್ತು ಆಭಿಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾವೇರಿ ನೀರಿನ ವಿವಾದ ಸಮಯದ/ಬಂದ್ ಸಮಯದಲ್ಲಿ ಹಾನಿಗೊಳಗಾದ ವಸ್ತುಗಳ. ಕಟ್ಟಡಗಳ. ವಾಹನಗಳ ಮತ್ತು ಇತರೆ ನಾಶವಾದ ವಸ್ತುಗಳ ಅಂದಾಜು ಹಣವೆಷ್ಟು:

ಆ) ರಾಜ್ಯದಿಂದ ತಮಿಳುನಾಡಿಗೆ ಹೋದ ತಮಿಳರ ಸಂಖ್ಯೆ ಎಷ್ಟು:

ಇ) ವಾಪಸು ಬಂದವರ ಸಂಖ್ಯೆ ಎಷ್ಟು:

ಈ) ರಾಜ್ಯ ಸರ್ಕಾರದವರು ತಮಿಳರ ಸಂರಕ್ಷಣೆಗೆ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಆಬ್ಕಾರಿ ಸಚಿವರು):

ಅ) ರೂ. 46.98.53.017-00

ಆ) ಸುಮಾರು 69.085 ಜನರು.

ಇ) ಬಹುತೇಕ ಎಲ್ಲರೂ ವಾಪಸ್ಸು ಬಂದಿರುತ್ತಾರೆ.

ಈ) ತಮಿಳರು ವಾಸಿಸುವ ಸ್ಥಳಗಳಲ್ಲಿ ಅವರ ಮೇಲಿನ ದುಷ್ಕೃತ್ಯಗಳನ್ನು ತಡೆಯಲು ಜಿಗಿ ಬಂದೋಬಸ್ತು ಏರ್ಪಡಿಸಲಾಗಿದೆ. ತಮಿಳರ ಪ್ರಾಣ. ಆಸ್ತಿ-ಪಾಸ್ತಿ ಹಾನಿಯಾಗದಂತೆ ಸಂಪೂರ್ಣ ಸಂರಕ್ಷಣಾ ಕ್ರಮವನ್ನು ತೆಗೆದುಕೊಳ್ಳ ಲಾಗಿದೆ. ರಾಜ್ಯದಿಂದ ವಲಸೆ ಹೋದ ಹಾಗೂ ರಾಜ್ಯಕ್ಕೆ ವಲಸೆ ಬಂದವರಿಗೆ ಗಡಿ ಜಿಲ್ಲೆಗಳಲ್ಲಿ ಪುನರ್ವಸತಿ. ಊಟ ಹಾಗೂ ಬಟ್ಟೆಬರೆ ವ್ಯವಸ್ಥೆ ಮಾಡಲಾಗಿದೆ.

ರಾಜ್ಯದಲ್ಲಿ ನಡೆದಿರುವ ವರದಕ್ಷಿಣೆ ಪ್ರಕರಣಗಳ ಸಂಖ್ಯೆ

1817. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ 1989 ರಿಂದ ಇಲ್ಲಿಯವರೆಗೆ ಎಷ್ಟು ವರದಕ್ಷಿಣೆ ಪ್ರಕರಣಗಳು ನಡೆದಿವೆ?

2) ಇವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಎಷ್ಟು ಜನ ಸಾವಿಗೀಡಾಗಿದ್ದಾರೆ?

3) ಸರ್ಕಾರ ವರದಕ್ಷಿಣೆ ಪ್ರಕರಣಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಂಡಿದೆಯೇ? ಯಾವುವು (ವಿವರ ನೀಡುವುದು)?